ಅಧ್ಯಕ್ಷರು : ನಾನು ಆವೇಶದಿಂದಲೂ ಹೇಳಿಲ್ಲ, ತಪ್ಪನ್ನೂ ಹೇಳಲಿಲ್ಲ. ನಾನು ಎರಡನ್ನೂ ಮಾಡಲಿಲ್ಲ. ನಾನು ಅದನ್ನೇ ಹೇಳುತ್ತಿದ್ದೇನೆ. ನಾನು ಸರಿಯಾದ ಅರ್ಥದಲ್ಲಿ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರಿಗೆ ತಾನು ಮಂತ್ರಿಯೇ ಅಲ್ಲವೇ ಎಂದು ಅರ್ಥ ಆಗುವುದಿಲ್ಲವೇನು?ಅವರು ಕನ್ನಡ ಬಲ್ಲವರಾಗಿದ್ದಾರೆ, ಅವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರ ಕಾರುಗಳನ್ನು ಹಿಂದಕ್ಕೆ ಕೊಟ್ಟು ಬಿಡುತ್ತೇನೆಂದರೆ ನಾನು ಮಂತ್ರಿಯಾಗಿದ್ದೇನೆ. ಕೊಟ್ಟುಬಿಡುತ್ತೇನೆಂದು ಅರ್ಥ ಬರುವುದಕ್ಕೆ ಸಾಧ್ಯ ಇದೆಯೇನು ಬರುವುದಕ್ಕೆ ಸಾಧ್ಯ ಇಲ್ಲ. ತಮ್ಮಲ್ಲಿ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಅವರ ಮೇಲೆ ಸಿಟ್ಟಾಗಿ... ದಯಮಾಡಿ ಕೇಳಿ..

ಶ್ರೀ ವಾಟಾಳ್ ನಾಗರಾಜ್ : ಅವರು ಸಭಾ ತ್ಯಾಗ ಮಾಡಿದರು ಎಂದು ನಾನು ಅವರ ಹಿಂದೆ ಬೆಂಬಲ ಕೊಟ್ಟು ಸಭಾತ್ಯಾಗ ಮಾಡುತ್ತಿಲ್ಲ. ಈ ಸದನದ ಶಾಸಕರಿಗೆ ಆಗಿರತಕ್ಕ ಅಗೌರವವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನ ಬಿಟ್ಟು ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ನಾನು ಬಿಜೆಪಿಯವರಿಗೆ ಬೆಂಬಲ ಕೊಟ್ಟು ಸಭಾ ತ್ಯಾಗ ಮಾಡುತ್ತಿಲ್ಲ.

ಅಧ್ಯಕ್ಷರು : ತಾವು ಹೋಗುವ ಮೊದಲು ನನ್ನ ಮಾತು ಕೇಳಿ.

(ಮಾನ್ಯ ವಾಟಾಳ್ ನಾಗರಾಜ್ ಅವರು
ಸಭಾತ್ಯಾಗ ಮಾಡುತ್ತಾ ಮಾತನಾಡುತ್ತದ್ದರು)

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಇಲ್ಲಿ ವಾಕೌಟ್ ಮಾಡುವ ಪ್ರಿಲಿಮಿನರಿಯಾಗಿ ಇಲ್ಲಿ ಮಾತನಾಡುತ್ತಿಲ್ಲ. ವಾಕೌಟ್ ಮಾಡುವಂತಹ ಪ್ರಶ್ನೆ ನಾನು ಮಾಡುತ್ತಿಲ್ಲ.

ಅಧ್ಯಕ್ಷರು : ನಂಜೇಗೌಡರು ಕೂಡ ನಾವು ಖರ್ಗೆಯವರು, ಮೊಯಿಲಿಯವರು ಮಾತನಾಡುತ್ತಿದ್ದೆವು ಎಂದು ಹೇಳಿದರು. sitting here I don't want to feel guilty of me. ಅವರಿಗೆ ಒಂದು ನಿಮಿಷ ಇರಿ ಎಂದು ಹೇಳಿದೆ, ಅವರು ಹೊರಟು ಹೋದರು. ಚೀಫ್ ಮಿನಿಸ್ಟರ್ ಕೊಟ್ಟಂತಹ ರಿಪ್ಲೈಯಿಂದ ಅವರಿಗೆ ಅಸಮಾಧಾನ ಆಗಿದೆ ಲೆಜಿಸ್ಲೇಚರ್ ಸೆಕ್ರಟರಿಯೇಟ್‌ನಿಂದ ಕೊಟ್ಟಿರತಕ್ಕ ಫೆಸಿಲಿಟೀಸ್‌ನ್ನು ರಿಟರ್ನ್ ಮಾಡಿದರೆ ಚೀಫ್ ಮಿನಿಸ್ಟರ್ ಮೇಲೆ ಪ್ರೊಟೆಸ್ಟ್ ಮಾಡಿದ ಹಾಗೆ ಆಗುತ್ತದೆಯೋ ನನ್ನ ಮೇಲೆ ಪ್ರೊಟೆಸ್ಟ್ ಮಾಡಿದ ಹಾಗೆ ಆಗುತ್ತದೆಯೋ?

ಶ್ರೀ ಎಂ. ವೀರಪ್ಪ ಮೊಯಿಲಿ : ಅದೇ ವಿಷಯ ನಾನು ಮಾತನಾಡಬೇಕಾಗಿದೆ.

ಅಧ್ಯಕ್ಷರು : ಅದೇ ಇಂಟೆನ್‌ಷನ್‌ನಿಂದ ನಾನು ಹೇಳಿದನೇ ಹೊರತು ಯಾವುದೇ ಕಾರಣಕ್ಕೂ ಕೂಡ ಅವರನ್ನು ಆ ರೀತಿ ಹೋಲಿಸಿ ಮಾತನಾಡಬೇಕು ಎನ್ನತಕ್ಕ ಅಭಿಪ್ರಾಯ ಇರಲಿಲ್ಲ. ಅದಕ್ಕೆ ನಾನು ಹೇಳಿದ ಮಾತನ್ನು ಕಾಂಟೆಕ್ಸ್ಟ್‌ನ್ನು ಸ್ಪಷ್ಟವಾಗಿ ಕ್ಲಾರಿಫೈ ಮಾಡಿ ಹೇಳಿದರೂ ಕೂಡ if they try to convey different meaning...